# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 540 |
| ಸದಸ್ಯರ ಹೆಸರು | : | ಡಾ॥ ಉಮಾಶ್ರೀ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 14.08.2025 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿಯವರು |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ತನ್ನ ವ್ಯಾಪ್ತಿಯ ಸ್ವತ್ತುಗಳ ಮೇಲಿನ ಆಸ್ತಿಗಳಿಗೆ ತೆರಿಗೆ ಹೆಚ್ಚಳ ಮಾಡಿದೆಯೇ; ಮಾಡಿದ್ದಲ್ಲಿ ಎಂದಿನಿಂದ ಇದು ಜಾರಿಯಾಗಿದೆ; ಶೇಕಡಾ ಎಷ್ಟು ತೆರಿಗೆ ಹೆಚ್ಚಿಸಲಾಗಿದೆ;</td><td>ಹೌದು.<br>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಸ್ವತ್ತುಗಳಿಗೆ ದಿನಾಂಕ: 01.04.2025 ರಿಂದ ಜಾರಿಗೆ ಬರುವಂತೆ 2025-26ನೇ ಸಾಲಿನಿಂದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮಾರ್ಗಸೂಚಿ ದರ ಪರಿಷ್ಕರಣೆಗನುಗುಣವಾಗಿ ಆಸ್ತಿ ತೆರಿಗೆ ಪರಿಷ್ಕರಿಸಲಾಗಿರುತ್ತದೆ.</td></tr>
<tr><td>(ಆ)</td><td>ಈ ವಿನೂತನ ತೆರಿಗೆ ಹೆಚ್ಚಳಕ್ಕೆ ಎಷ್ಟು ಜನ ಒಳಪಡುತ್ತಾರೆ; ಪ್ರತಿ ವರ್ಷ ಬೆಂಗಳೂರು ಪ್ರಾಧಿಕಾರ ಎಷ್ಟು ತೆರಿಗೆ ಸಂಗ್ರಹಿಸುತ್ತದೆ; (3 ವರ್ಷಗಳ ವಿವರ ನೀಡುವುದು) ಹಾಗೂ ಎಷ್ಟು ತೆರಿಗೆ ವಸೂಲಾಗದೆ ಬಾಕಿ ಉಳಿದಿದೆ; ಯಾವ ರೀತಿಯ ಮಾನದಂಡ ಅಳವಡಿಸಿ ಆಸ್ತಿ ತೆರಿಗೆ ಹೆಚ್ಚಳ ಮಾಡಲಾಗುತ್ತದೆ;</td><td>
<ul>
<li>ಒಟ್ಟು 1,13,760 ನಿವೇಶನದಾರರು(ಖಾಲಿ ನಿವೇಶನಗಳು) ತೆರಿಗೆ ಹೆಚ್ಚಳಕ್ಕೆ ಒಳಪಡುತ್ತಾರೆ.</li>
<li>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕಳೆದ ಮೂರು ವರ್ಷಗಳಲ್ಲಿ ಸಂಗ್ರಹಿಸಿರುವ ತೆರಿಗೆಯ ವಿವರ ಕೆಳಕಂಡಂತಿದೆ:-</li>
</ul>
<table>
<tr><th>ಕ್ರಮ ಸಂಖ್ಯೆ</th><th>ವರ್ಷ</th><th>ಸಂಗ್ರಹಿಸಿದ ಆಸ್ತಿ ತೆರಿಗೆ (ರೂ.ಗಳಲ್ಲಿ)</th></tr>
<tr><td>1</td><td>2022-23</td><td>40,28,30,649/-</td></tr>
<tr><td>2</td><td>2023-24</td><td>42,93,60,440/-</td></tr>
<tr><td>3</td><td>2024-25</td><td>40,40,54,347/-</td></tr>
</table>
<ul>
<li>ದಿನಾಂಕ:31.03.2025ರ ಅಂತ್ಯಕ್ಕೆ ರೂ.52,94,33,353/- ಆಸ್ತಿ ತೆರಿಗೆ ಬಾಕಿ ಇರುತ್ತದೆ.</li>
<li>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ನಿವೇಶನಗಳಿಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ನಿಗದಿಪಡಿಸುವ ಮಾರ್ಗಸೂಚಿ ಬೆಲೆಯ ಆಧಾರದ ಮೇರೆಗೆ ನಿವೇಶನಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಆಸ್ತಿ ತೆರಿಗೆಯನ್ನು ಪರಿಷ್ಕರಿಸಲು 2016 ರಲ್ಲಿ ಪ್ರಾಧಿಕಾರದ ಹಂತದಲ್ಲಿ ನಿರ್ಣಯಿಸಲಾಗಿರುತ್ತದೆ.</li>
<li>ಅದರಂತೆ, 2023 ರಲ್ಲಿ ಪರಿಷ್ಕರಣೆಗೊಂಡಿರುವ ಮಾರ್ಗಸೂಚಿ ದರವನ್ನು ಅಳವಡಿಸಿಕೊಂಡು ಆಸ್ತಿ ತೆರಿಗೆಯನ್ನು 2025-26 ನೇ ಸಾಲಿನಿಂದ ಪರಿಷ್ಕರಿಸಲಾಗಿರುತ್ತದೆ.</li>
</ul>
</td></tr>
</table>

---2

| | | |
|---|---|---|
| (ಇ) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರಿನಲ್ಲಿ ನಿರ್ಮಾಣಗೊಂಡಿರುವ ಬಡಾವಣೆಗಳು ಯಾವುವು; ಈ ಎಲ್ಲಾ ಬಡಾವಣೆಗಳಿಗೂ ಈ ತೆರಿಗೆ ಅನ್ವಯವಾಗುತ್ತದೆಯೇ? | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಾಣಗೊಂಡು ಪ್ರಾಧಿಕಾರದ ಸುಪರ್ದಿಯಲ್ಲಿರುವ ಈ ಕೆಳಕಂಡ ಬಡಾವಣೆಗಳಿಗೆ ತೆರಿಗೆ ಅನ್ವಯವಾಗುತ್ತದೆ.<br>1. ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ<br>2. ಸರ್.ಎಂ.ವಿಶ್ವೇಶ್ವರಯ್ಯ ಮುಂದುವರೆದ ಬಡಾವಣೆ<br>3. ಬನಶಂಕರಿ 6ನೇ ಹಂತ<br>4. ಬನಶಂಕರಿ 6ನೇ ಹಂತ ಮುಂದುವರೆದ ಬಡಾವಣೆ<br>5. ಜೆ.ಪಿ.ನಗರ 8ನೇ ಫೇಸ್<br>6. ಜೆ.ಪಿ.ನಗರ 9ನೇ ಫೇಸ್<br>7. ಅಂಜನಾಪುರ ಬಡಾವಣೆ<br>8. ಅಂಜನಾಪುರ ಮುಂದುವರೆದ ಬಡಾವಣೆ<br>9. ಅರ್ಕಾವತಿ ಬಡಾವಣೆ<br>10. ನಾಡಪ್ರಭು ಕೆಂಪೇಗೌಡ ಬಡಾವಣೆ |

**ಸಂಖ್ಯೆ: ನಅಇ 455 ಬೆಂಆಸೇ 2025(ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ